CAREERINDIA

# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ
ಮಲ್ಲೇಶ್ವರಂ, ಬೆಂಗಳೂರು – 560 003

**KARNATAKA SCHOOL EXAMINATION AND ASSESSMENT BOARD**
**Malleshwaram, Bengaluru – 560 003**

## 2024-25ರ ಎಸ್.ಎಸ್.ಎಲ್.ಸಿ. ಮಾದರಿ ಪ್ರಶ್ನೆಪತ್ರಿಕೆ-1
## S.S.L.C. MODEL QUESTION PAPER-1 : 2024-25

## ವಿಷಯ : ತೃತೀಯ ಭಾಷೆ — ಕನ್ನಡ
## Subject : Third Language — KANNADA

**ವಿಷಯ ಸಂಕೇತ : 62-K** | **Subject Code : 62-K**

ಸಮಯ : 3 ಗಂಟೆ ] [ Time : 3 Hours

ಗರಿಷ್ಠ ಅಂಕಗಳು : 80 ] [ Max. Marks : 80

---

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು ಒಟ್ಟು 38 ಪ್ರಶ್ನೆಗಳನ್ನು ಹೊಂದಿದೆ.

2. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

3. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ಸೂಚಿಸುತ್ತವೆ.

4. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

www.careerindia.com

[ Turn over

CAREERINDIA



**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ : 8 × 1 = 8**

1. ಕನ್ನಡ ವರ್ಣಮಾಲೆಯಲ್ಲಿರುವ ಅನುನಾಸಿಕ ಅಕ್ಷರಗಳ ಸಂಖ್ಯೆ

   (ಎ) ೦೫ (ಬಿ) ೦೬

   (ಸಿ) ೦೭ (ಡಿ) ೦೯

2. 'ನಿರಾಡಂಬರ' ಪದದ ವಿರುದ್ಧಾರ್ಥಕ ಪದ

   (ಎ) ಆಂಬರ (ಬಿ) ಅಂಬರ

   (ಸಿ) ಆಡಂಬರ (ಡಿ) ವಿರಾಡಂಬರ

3. ಕೆಳಗಿನವುಗಳಲ್ಲಿ ಅನ್ವರ್ಥಕ ನಾಮಪದಕ್ಕೆ ಉದಾಹರಣೆಯಾದ ಪದ

   (ಎ) ಪರ್ವತ (ಬಿ) ವಿಜ್ಞಾನಿ

   (ಸಿ) ಗೋದಾವರಿ (ಡಿ) ಮೂಡಣ

4. ಹಜರತ್ ಇಮಾಂ ಸಾಹೇಬರಿಗೆ ಬಹುಕಾಲ ಮಕ್ಕಳಾಗಿರಲಿಲ್ಲ – ಈ ವಾಕ್ಯದಲ್ಲಿ ಬಂದಿರುವ 'ಸಾಹೇಬರಿಗೆ' ಪದದ ವಿಭಕ್ತಿಯ ಹೆಸರು

   (ಎ) ಪ್ರಥಮ ವಿಭಕ್ತಿ (ಬಿ) ತೃತೀಯ ವಿಭಕ್ತಿ

   (ಸಿ) ಚತುರ್ಥಿ ವಿಭಕ್ತಿ (ಡಿ) ಸಪ್ತಮಿ ವಿಭಕ್ತಿ

www.careerindia.com

CAREERINDIA



5. ಬೀಚಿಯವರ ಬಹು ದೊಡ್ಡ ಮತ್ತು ಅತಿಮುಖ್ಯ ಭಾಗವೆ 'ಪುಸ್ತಕ ಪ್ರಪಂಚ' – ಇಲ್ಲಿ ಬಂದಿರುವ 'ಪುಸ್ತಕ' ಪದದ ತದ್ಭವ ರೂಪ

(ಎ) ಹಾವುಗೆ (ಬಿ) ಪುಸತಕ

(ಸಿ) ಹೊತ್ತಿಗೆ (ಡಿ) ಹೊತ್ತು

6. 'ಬೆಳದಿಂಗಳು' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ

(ಎ) ಅಂಶಿ ಸಮಾಸ (ಬಿ) ತತ್ಪುರುಷ ಸಮಾಸ

(ಸಿ) ದ್ವಿಗು ಸಮಾಸ (ಡಿ) ಕರ್ಮಧಾರಯ ಸಮಾಸ

7. ಮಗುವಿನ ಮುಖ ಕಮಲ ಅರಳಿತು – ಈ ವಾಕ್ಯದಲ್ಲಿರುವ ಅಲಂಕಾರ

(ಎ) ಉಪಮಾಲಂಕಾರ (ಬಿ) ರೂಪಕಾಲಂಕಾರ

(ಸಿ) ದೃಷ್ಟಾಂತಾಲಂಕಾರ (ಡಿ) ಶ್ಲೇಷಾಲಂಕಾರ

8. ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿರುವಂತೆ ರಚಿತವಾದ ವಾಕ್ಯ

(ಎ) ಸಂಯೋಜಿತ ವಾಕ್ಯ (ಬಿ) ಸಾಮಾನ್ಯ ವಾಕ್ಯ

(ಸಿ) ಮಿಶ್ರವಾಕ್ಯ (ಡಿ) ಅನ್ಯವಾಕ್ಯ

**II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ: 4 × 1 = 4**

9. ಪುರಂದರದಾಸರು : ಕೀರ್ತನೆ :: ಶಿಶುನಾಳ ಶರೀಫ : .........................

10. ಶಿವಾಜಿಯ ಮಗ : ರಾಜರಾಮ :: ಬೆಳವಡಿ ಮಲ್ಲಮ್ಮಜಿಯ ಮಗ : .......................

www.careerindia.com

CAREERINDIA



11. ಜಾತಿಮತದ ಗುಹೆಗಳಿಂದ : ಹೊರ ಬನ್ನಿರಿ ಬಯಲಿಗೆ :: ಕೃತಕ ತಿಮಿರದಾಳದಿಂದ : ..................

12. ಅನಾಚಾರವೇ : ನರಕ :: ಆಚಾರವೇ : .........................

**III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : 4 × 1 = 4**

13. ಶರೀಫರ ಆದರ್ಶಗುರುವಿನ ಹೆಸರೇನು ?

14. ರೈತನು ಮಳೆಯನ್ನು ಏನೆಂದು ಕರೆದಿದ್ದಾನೆ ?

15. ರೊಟ್ಟಿಯನ್ನು ಕಚ್ಚಿಕೊಂಡು ಹಾರಿಹೋದ ಪಕ್ಷಿ ಯಾವುದು ?

16. ಲೇಖಕರು ಹೇಳಿರುವಂತೆ ಮುಂದಿನ ಇಡೀ ಪೀಳಿಗೆಯ ಬದುಕು ದುಸ್ತರವಾಗುವಂತೆ ಮಾಡಿದ ಅಪರಾಧಿ ಯಾರು ?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 8 × 2 = 16**

17. ಗಾಂಧೀಜಿಯವರು ಅವಕ್ಕಾಗಲು ಕಾರಣವೇನು ?

18. ಮೋಹನಪುರದ ಸತ್ಯಾಗ್ರಹಿಗಳು ಮಾಡುತ್ತಿದ್ದ ಘೋಷಣೆಗಳಾವುವು ?

19. 'ವಿಶ್ವಾಮಿತ್ರ ಸೃಷ್ಟಿ'ಯು ಬೀಚಿಯವರ ಮೇಲೆ ಬೀರಿದ ಪ್ರಭಾವವನ್ನು ತಿಳಿಸಿ.

20. ಪೋರ್ಚುಗೀಸರು ಭಾರತೀಯರನ್ನು ಆರ್ಥಿಕವಾಗಿ ಶೋಷಣೆ ಮಾಡುತ್ತಿದ್ದ ರೀತಿಯನ್ನು ನಿಮ್ಮ ಮಾತುಗಳಲ್ಲಿ ಅಭಿವ್ಯಕ್ತಪಡಿಸಿ.

21. ಭೌಗೋಳಿಕವಾಗಿ ಭಾರತೀಯರೆಲ್ಲಾ ಒಂದೇ ಎಂದು ಕೆ.ಎಸ್. ನಿಸಾರ್ ಅಹಮದ್ ಅವರು ಹೇಗೆ ನಿರೂಪಿಸಿದ್ದಾರೆ ?

22. ಗ್ರಂಥಾಲಯದ ಒಳಹೊಕ್ಕಾಗ ಕವಿ ಸಿ.ಪಿ.ಕೆ.ಯವರು ಬೆದರಲು ಕಾರಣವೇನು ?

23. ಮೋಡಗಳು ಕಾಣಿಸಿಕೊಂಡಾಗ ರೈತನಿಗಾದ ಸಂತೋಷವನ್ನು ವಿವರಿಸಿ.

24. ಸೋಮೇಶ್ವರ ಶತಕದಲ್ಲಿ ತಿಳಿಸಿರುವಂತೆ ಮಂತ್ರಿಯಾಗಲು ಮತ್ತು ಯೋಗಿಯಾಗಲು ಯಾವ ಗುಣವನ್ನು ಹೊಂದಿರಬೇಕು ಎಂಬುದನ್ನು ನಿಮ್ಮ ಮಾತಿನಲ್ಲಿ ತಿಳಿಸಿ.

www.careerindia.com

CAREERINDIA



**V. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭದೊಡನೆ ಸ್ವಾರಸ್ಯವನ್ನು ಬರೆಯಿರಿ : 2 × 3 = 6**

25. "ನಮ್ಮ ರಾಜ್ಯ ರಾಜಕಾರಣಕ್ಕೆ ಎಷ್ಟು ಚೆನ್ನಾಗಿ ಅನ್ವಯಿಸುತ್ತದೆ."

26. "ಪಾರ್ಥನೊಲು ತತ್ತರಿಸಿ ವಿಸ್ಮಿತನಾಗಿ."

**VI. ಕೆಳಗಿನ ಪ್ರಶ್ನೆಗಳಿಗೆ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 4 × 3 = 12**

27. ಕೊಡಗಿನ ಗೌರಮ್ಮನವರ ಸಾಹಿತ್ಯ ಸೃಷ್ಟಿಗೆ ಪೂರಕವಾದ ವಿಚಾರಗಳಾವುವು ?

28. ರಾಮಸಿಂಗನು ತನ್ನ ಛಲವನ್ನು ಹೇಗೆ ಸಾಧಿಸಿದನು ? ವಿವರಿಸಿ.

29. ನವಯುಗದ ನಿರ್ಮಾಣದಲ್ಲಿ ಯುವ ಜನತೆಯ ಪಾತ್ರವೇನು ? ವಿವರಿಸಿ.

30. ಪುರಂದರದಾಸರು ಕಟಪ ಭಕ್ತಿಯ ಆರಾಧಕರನ್ನು ಅಣಕಿಸಿ ಅವಹೇಳನ ಮಾಡಿದ ಬಗೆಯನ್ನು ಮೆಚ್ಚಿ ನಿಮ್ಮ ಮಾತುಗಳಲ್ಲಿ ಬರೆಯಿರಿ.

**VII. ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ ಮತ್ತು ಕೃತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ : 2 × 3 = 6**

31. ಆರ್.ಎಸ್. ಸುಂಕದ

32. ಕೆ.ಎಸ್. ನಿಸಾರ್ ಅಹಮದ್

**VIII. ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು, ವಿಸ್ತರಿಸಿ ಬರೆಯಿರಿ : 1 × 3 = 3**

33. "ಬೆಳೆಯುವ ಪೈರು ಮೊಳಕೆಯಲ್ಲಿ."

**ಅಥವಾ**

"ಮನಸ್ಸಿದ್ದರೆ ಮಾರ್ಗ."

www.careerindia.com

CAREERINDIA



**IX. ಕೆಳಗಿನ ಒಂದು ಪ್ರಶ್ನೆಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 1 × 4 = 4**

34. ಮಿನಿಪೊಲೀಸ್ ನಗರದಲ್ಲಿ ಗೊರೂರರು ತಪ್ಪಿಸಿಕೊಂಡ ಪ್ರಕರಣವನ್ನು ಅಭಿವ್ಯಕ್ತಪಡಿಸಿರಿ.

**ಅಥವಾ**

ಮಿನಿಪೊಲೀಸ್ ನಗರದಲ್ಲಿ ಎದುರಾದ ಸಮಸ್ಯೆಯಿಂದ ಗೊರೂರರು ಪಾರಾದ ಬಗೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ : 1 × 4 = 4**

35. ಕಂಚುಗಾರನ ....................................................

....................................................................

....................................................................

.................................................... ಮಾಡುವುದು

**ಅಥವಾ**

ನಾನು ............................................................

....................................................................

....................................................................

.............................................. ಕಾರ್ಯಗಳೆಲ್ಲವು.

**XI. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ : 1 × 4 = 4**

36. ರೈತರು 'ಅನ್ನದಾತ' ದೇಶದ 'ಬೆನ್ನೆಲುಬು' ಎಂದೆಲ್ಲ ಕರೆಯುತ್ತಾರೆ. ಆದರೆ ಇಂದು ರೈತರ ಪರಿಸ್ಥಿತಿ ಚಿಂತಾಜನಕವಾಗಿದೆ. ನಿಸರ್ಗದ ಜೊತೆ ಸೆಣಸಾಡಬೇಕು. ಸಕಾಲಕ್ಕೆ ಸರಿಯಾಗಿ ಮಳೆ ಬರುವುದಿಲ್ಲ ಉತ್ತಮಗುಣಮಟ್ಟದ ಬೀಜ ಗೊಬ್ಬರದ ಸಮಸ್ಯೆಯಿಂದ ಭೂಮಿ ಬರಿದಾಗುತ್ತಿದೆ. ಕ್ರಿಮಿಕೀಟಗಳ

www.careerindia.com

CAREERINDIA



ಹಾವಳಿಯಿಂದ ಬೆಳೆಗೆ ರೋಗಗಳು ತಗುಲಿ ಬೆಳೆ ಸಿಗದ ಸಮಸ್ಯೆ, ಬೆಳೆ ಬೆಳೆದರೂ ಸರಿಯಾದ ಬೆಲೆಸಿಗದೆ ರೈತರು ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ವ್ಯವಸಾಯ ಇಲ್ಲದಿದ್ದರೆ ದೇಶದ ಆಟವೇ ನಡೆಯದು. ಕೃಷಿಕರು ಭೂಮಿಯನ್ನು ಉಳುವುದಿಲ್ಲ ಎಂದು ಸತ್ಯಾಗ್ರಹ ಮಾಡಿದರೆ ಜನರು ಆಹಾರವಿಲ್ಲದೆ ಸಾಯುವ ಪರಿಸ್ಥಿತಿ ಬರುತ್ತದೆ. ದೇಶದ ಅಭಿವೃದ್ಧಿ ಕುಂಠಿತವಾಗುತ್ತದೆ. ಗೆಡ್ಡೆಗೆಣಸುಗಳನ್ನು ತಿಂದು ಎಲೆಗಳ ರಸ ಕುಡಿದು ಬದುಕುವ ಕಾಲ ಮತ್ತೆ ಬರಬಹುದು. ಆಹಾರಕ್ಕಾಗಿ ಮನುಷ್ಯರು ಮತ್ತು ಪ್ರಾಣಿಗಳ ನಡುವೆ ಹೋರಾಟ ಏರ್ಪಡಬಹುದು. ಆಹಾರವಿಲ್ಲದೆ ಬದುಕಲು ಸಾಧ್ಯವಿಲ್ಲ. ಅಕ್ಕಿ, ರಾಗಿ, ಗೋಧಿ, ಜೋಳ, ತರಕಾರಿಗಳನ್ನು ತಯಾರಿಸುವ ಯಾವ ಕಾರ್ಖಾನೆಗಳು ಇಲ್ಲ. ಇದಕ್ಕೆಲ್ಲ ರೈತರ ಬೆವರು ಭೂಮಿಗೆ ಸುರಿಯಬೇಕು.

***ಪ್ರಶ್ನೆಗಳು :***

ಎ) ದೇಶದ ಬೆನ್ನೆಲುಬು ಯಾರು ?

ಬಿ) ಕಾರ್ಖಾನೆಗಳು ಏನನ್ನು ಬೆಳೆಯಲು ಸಾಧ್ಯವಿಲ್ಲ ?

ಸಿ) ಭೂಮಿಯನ್ನು ಉಳುವುದಿಲ್ಲವೆಂದು ರೈತನು ಸತ್ಯಾಗ್ರಹ ಮಾಡಿದರೆ ಏನಾಗುತ್ತದೆ ?

ಡಿ) ದೇಶದ ಆಟ ಯಾವುದರ ಮೇಲೆ ಅವಲಂಬಿತವಾಗಿದೆ ?

**XII. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ : 1 × 4 = 4**

37. ರಾಷ್ಟ್ರೀಯ ಭಾವೈಕ್ಯತೆ

**ಅಥವಾ**

2024 ರ ಏಷಿಯನ್ ಕ್ರೀಡಾಕೂಟದಲ್ಲಿ ಭಾರತೀಯರ ಸಾಧನೆ.



www.careerindia.com

CAREERINDIA



**XIII. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ : 1 × 5 = 5**

38. ನಿಮ್ಮನ್ನು ಧಾರವಾಡದ ಸಾಧನಕೇರಿಯ ನಿವಾಸಿ 'ಆಕರ್ಷಣ್' ಎಂದು ಭಾವಿಸಿಕೊಂಡು, ಬೆಂಗಳೂರಿನ ನೆಹರು ತಾರಾಲಯಕ್ಕೆ ಭೇಟಿ ನೀಡಲು ಅನುಮತಿಯನ್ನು ಕೋರಿ ನಿರ್ದೇಶಕರಿಗೆ ಒಂದು ಮನವಿ ಪತ್ರವನ್ನು ಬರೆಯಿರಿ.

**ಅಥವಾ**

ನಿಮ್ಮನ್ನು ತುಮಕೂರಿನ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ಅನಘ' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ಆಚರಿಸಿದ ಪ್ರಜಾಪ್ರಭುತ್ವ ದಿನಾಚರಣೆಯನ್ನು ಕುರಿತು ಅಥಣಿಯಲ್ಲಿ ವಾಸವಾಗಿರುವ 'ರಾಮಚಂದ್ರ' ಎಂಬ ಹೆಸರಿನ ನಿಮ್ಮ ತಂದೆಯವರಿಗೆ ಪತ್ರವನ್ನು ಬರೆಯಿರಿ.

www.careerindia.com